## ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಬನಹಟ್ಟಿ

**ಸಿಸಿ.523/2019**
**ಸಿ.ಡಬ್ಲ್ಯೂ: 11 ಪಿ.ಡಬ್ಲ್ಯೂ: 8**

| | | |
|---|---|---|
| ಸಾಕ್ಷಿದಾರರ ಹೆಸರು | ರಾಮಣ್ಣ ತೋಳಲಮಟ್ಟಿ | |
| ತಂದೆ ಹೆಸರು | ನಾಗಣ್ಣ | |
| ವಯಸ್ಸು | 47 | ವರ್ಷ |
| ಉದ್ಯೋಗ | ಪೊಲೀಸ ಪೇದೆ | |
| ವಾಸಸ್ಥಳ | ಬನಹಟ್ಟಿ | |

**ಸಾಕ್ಷಿಯನ್ನು ಇಂದು ದಿನಾಂಕಃ 11-02-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

ನಾನು 2013 ನೇ ಇಸವಿಯಿಂದ 2018 ಇಸವಿಯವರೆಗೆ ತೇರದಾಳ ಪೊಲೀಸ ಠಾಣೆಯಲ್ಲಿ ಪೊಲೀಸ ಪೇದೆ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 09-11-2018 ರಂದು ರಾತ್ರಿ 10.00 ಗಂಟೆಗೆ ತೇರದಾಳ ಪೊಲೀಸ ಠಾಣೆ ಗುನ್ನಾ ಸಂಖ್ಯೆಃ122/2018 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಮೂಲಕ ಪ್ರ ವ ವ ಅನ್ನು ಮತ್ತು ಪಿರ್ಯಾದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಂತರ ನಾನು ಚಾಸಾ-15 ರವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

3. ಸಾಕ್ಷಿಯು ಪ್ರ ವ ವ ಅನ್ನು ನೋಡಿ ಗುರುತಿಸಿರುತ್ತಾರೆ , ಆದ ಕಾರಣ ಪ್ರ ವ ವ ಅನ್ನು ನಿಪಿ-11 ಎಂದು ಗುರುತಿಸಲಾಯಿತು.

4. ಸಾಕ್ಷಿಯು ಪಿರ್ಯಾದಿಯನ್ನು ನೋಡಿ ಗುರುತಿಸಿದ್ದು , ಸದರಿ ಪಿರ್ಯಾದಿಯನ್ನು ನಿಪಿ-12 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ:**

ದಿಃ 09-11-2018 ರಂದು ನಾನು ಪಿರ್ಯಾದಿಯನ್ನು ಪಡೆದು ಠಾಣಾ ಗುನ್ನಾ ಸಂಖ್ಯೆಃ 122/2018 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದರಂತೆ ಮೂಲ ಪ್ರ ವ ವ ಅನ್ನು ಹಾಗೂಪಿರ್ಯಾದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ-15 ರವರ ಮುಂದೆ ಹೇಳಿಕೆಯನ್ನು

ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

Sd/-
ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬನಹಟ್ಟಿ.